# ಬಳ್ಳಾರಿ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆ ಭರ್ತಿ ಮಾಡಲು ಪ್ರಕಟಿಸಿದ 01:01 ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಬಂದ ಆಕ್ಷೇಪಣೆಗಳ ವಿವರ.

| ಕ್ರಸಂ | ಅರ್ಜಿಯ ಕ್ರಸಂ | ಅರ್ಜಿದಾರರ ಹೆಸರು | ಆಕ್ಷೇಪಣೆ ವಿವರ | ಹಿಂಬರಹ |
|---|---|---|---|---|
| 1 | 204094 | K ANNAYYA | ಅರ್ಜಿದಾರರಾದ ಕೆ. ಅನ್ನಯ್ಯ ಇವರು ಮನವಿ ಅರ್ಜಿ ದಿನಾಂಕ27-11-2018ರಲ್ಲಿ ಅರ್ಜಿ ಸಂಖ್ಯೆ203971 ಶರಣಪ್ಪ ತಂದೆ ಗುರಣ್ಣನವರು ಪ್ರವರ್ಗ-1 ಶ್ರವಣ ದೋಷ ಅಂಗವಿಕಲ ಕೋಟಾದಡಿಯಲ್ಲಿ ಆಯ್ಕೆಯಾಗಿರುತ್ತಾರೆ ಹಾಗೂ 1:1 ಪರಿಶೀಲನಾ ಪಟ್ಟಿಗೆ ಕೂಡ ಆಯ್ಕೆ ಆಗಿರುತ್ತಾರೆ.1:5 ದಾಖಲಾತಿ ಪರಿಶೀಲನಾ ಸಂದರ್ಭದಲ್ಲಿ ನಾನು ಅವರ ಜೊತೆ ಮೇಲಧ್ವನಿಯಲ್ಲಿ ಮಾತನಾಡಿದ್ದರೂ ಸಹ ಅವರು ಮಾತನಾಡಿರುತ್ತಾರೆ ಹಾಗೂ ಮೊಬೈಲ್‌ನಲ್ಲಿ ಮಾತನಾಡುತ್ತಿರುವುದನ್ನು ನಾನು ಕಣ್ಣಾರೆ ಕಂಡಿರುತ್ತೇನೆ. ಅವರು ಅಂಗವಿಕಲರು ಎಂದು ಅಸಿಂಧು ಎಂದು ಅನಿಸುತ್ತದೆ.ಆದ್ದರಿಂದ ಕೂಲಂಕುಷವಾಗಿ ಪರಿಶೀಲಿಸಿ ನ್ಯಾಯದೊರಕಿಸಿ ಕೊಡುವಂತೆ ಕೋರಿರುತ್ತಾರೆ. | ಅರ್ಜಿದಾರರಾದ ಕೆ. ಅನ್ನಯ್ಯ ಇವರು ಸ್ಥಳೀಯ ವೃಂದದ CA1-H ರಲ್ಲಿ 1-5ಆಯ್ಕೆ ಪಟ್ಟಿಯಲ್ಲಿದ್ದು, ಅರ್ಜಿದಾರರು ವಿಕಲಚೇತನ ಪ್ರಮಾಣ ಪತ್ರವು ದಿನಾಂಕ:24-9-2018ರಂದು ಪಡೆದು ಸಲ್ಲಿಸಿರುತ್ತಾರೆ. ಅದರೆ ಅಧಿಸೂಚನೆಯಂತೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:16-8-2018ರೊಳಗೆ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ. ಅಂಗವಿಕಲತೆಯ ಗುರುತಿನ ಚೀಟಿ ಮತ್ತು ದೃಢೀಕರಣ ಜೆರಾಕ್ಸ ಪ್ರತಿಗಳನ್ನು ಪರಿಶೀಲಿಸಲಾಗಿ ವಿಮ್ಸ್ ಬಳ್ಳಾರಿಯ ತಜ್ಞ ವೈದ್ಯರು ದೃಢೀಕರಿಸಿದ್ದು, ಅಧ್ಯಕ್ಷರು(Chairman) ದೃಢಿಕರಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ಅರ್ಜಿ ಸಲ್ಲಿಸುವಾಗ Reservation Claim ಮಾಡಿದ ಅಂಗವಿಕಲತೆಯನ್ನು ಮಾತ್ರ ತಿರಸ್ಕರಿಸಿ ಉಳಿದ ಹಕ್ಕುಗಳನ್ನು ಹಾಗೆ ಇಟ್ಟು ಸದ್ರಿಯವರ ಅರ್ಜಿಯನ್ನು ಪರಿಗಣಿಸಲು ಸಮಿತಿ ಅಂಗೀಕರಿಸಲಾಯಿತ್ತು. ಅದರೂ ಕೂಡ ಸದ್ರಿಯವರು ಆಯ್ಕೆ ಆಗಿರುವುದಿಲ್ಲ. ಅಲ್ಲದೇ ಸದ್ರಿಯವರ ಮನವಿಯಲ್ಲಿ ಶರಣಪ್ಪ ತಂದೆ ಗುರಣ್ಣನವರು ಅಂಗವಿಕಲರು ಅಲ್ಲ ಎಂದು ದೂರು ಸಲ್ಲಿಸಿರುತ್ತಾರೆ. ಈ ಕುರಿತು ನೇಮಕಾತಿ ನಿಯಮಗಳ ಅನ್ವಯ ಅಂಗವಿಕಲ ಅಭ್ಯರ್ಥಿಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ದೈಹಿಕ ಪರೀಕ್ಷೆಗೆ ಒಳಪಡಿಸಿ ಪರಿಶೀಲಿಸಿದ ನಂತರ ನೇಮಕಾತಿ ಆದೇಶವನ್ನು ನೀಡುವುದರಿಂದ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿದೆ. |
| 2 | 204677 | AMARESH | ಅರ್ಜಿದಾರರಾದ ಅಂಬರೀಶ್ ಇವರು ಮನವಿ ಅರ್ಜಿ ದಿನಾಂಕ27-11-2018ರಲ್ಲಿ ನನ್ನ ಪಿಯುಸಿ ಅಂಕಗಳಿಗಿಂತ ಕಡಿಮೆ ಅಂಕ ಇರುವ ಅಭ್ಯರ್ಥಿ ಆಯ್ಕೆಯಾಗಿರುತ್ತಾರೆ. | ಅರ್ಜಿದಾರರಾದ ಅಂಬರೀಶ್ ಇವರು ಸ್ಥಳೀಯ ವೃಂದದ SC-R ರಲ್ಲಿ 1-5ಆಯ್ಕೆ ಪಟ್ಟಿಯಲ್ಲಿದ್ದು, ಅರ್ಜಿದಾರರು 1 ರಿಂದ 6 ನೇ |

| | | | | |
|---|---|---|---|---|
| | | | ಅರ್ಜಿ ಸಂಖ್ಯೆ 214458 ಡಿ.ಸಿದ್ದೇಶ ತಂದೆ ದುರುಗಪ್ಪ ಇವರು ಕನ್ನಡ ಮಾಧ್ಯಮ, ಗ್ರಾಮೀಣಾ, 371ಜೆ,ಪರಿಶಿಷ್ಟ ಜಾತಿ ಮೀಸಲಾತಿ ಹೊಂದಿರುತ್ತಾರೆ ಹಾಗೂ ನಾನು ಕೂಡ ಇವರು ಹೊಂದಿರುವ ಎಲ್ಲಾ ಮೀಸಲಾತಿಗಳನ್ನು ಹೊಂದಿರುತ್ತೇನೆ. ಡಿ.ಸಿದ್ದೇಶ ಇವರ ಅಂಕಗಳಿಗಿಂತ 02 ಅಂಕಗಳು ಹೆಚ್ಚಾಗಿರುತ್ತದೆ. ಕಾರಣ ನೇಮಕಾತಿ ಪ್ರಾಧಿಕಾರಿಗಳು ನ್ಯಾಯಾ ಒದಗಿಸಿಕೊಡಬೇಕೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. | ತರಗತಿವರೆಗಿನ ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಮತ್ತು ಗ್ರಾಮೀಣಾ ಅಭ್ಯರ್ಥಿಯ ವ್ಯಾಸಂಗ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಪರಿಶೀಲನಾ ಸಮಯದಲ್ಲಿ ಸಲ್ಲಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರು ಅರ್ಜಿ ಸಲ್ಲಿಸುವಾಗ Reservation Claim ಮಾಡಿದ ಕನ್ನಡ ಮಾಧ್ಯಮ ವ್ಯಾಸಂಗ ಮತ್ತು ಗ್ರಾಮೀಣಾ ಅಭ್ಯರ್ಥಿ ಆಯ್ಕೆಯನ್ನು ಮಾತ್ರ ತಿರಸ್ಕರಿಸಿ ಉಳಿದ ಹಕ್ಕುಗಳನ್ನು ಹಾಗೆ ಇಟ್ಟು ಸದ್ರಿಯವರ ಅರ್ಜಿಯನ್ನು ಪರಿಗಣಿಸಲು ಸಮಿತಿ ಅಂಗೀಕರಿಸಲಾಯಿತ್ತು. ಅದರೂ ಕೂಡ ಸದ್ರಿಯವರು 1:1 ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಬಂದಿರುವುದಿಲ್ಲ ಹಾಗಾಗಿ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿದೆ. |
| 3 | - | - | 1:5 ಆಯ್ಕೆ ಅನುಪಾತದಲ್ಲಿ ಆಯ್ಕೆಯಲ್ಲಿ ಅಂಗವಿಕಲರಿಗೆ ಯಾವುದೇ ದೈಹಿಕ ಪರೀಕ್ಷೆಗೆ ಒಳಪಡಿಸದೇ 1:1 ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು, ಆದ್ದರಿಂದ ನನಗೆ ಈ ಆಯ್ಕೆ ಪಟ್ಟಿಯಲ್ಲಿ ಗೊಂದಲ ಶುರುವಾಗಿದೆ. 1:5 ಅನುಪಾತದಲ್ಲಿ ದಾಖಲಾತಿ ಪರಿಶೀಲನೆಗೆ ಹಾಜರಾದಾಗ ಕೆಲವು ಅಭ್ಯರ್ಥಿಗಳು ದೈಹಿಕ ಅಂಗವಿಕಲ ಇರದೆ ದೈಹಿಕ ಅಂಗವಿಕಲ ಎಂದು ಪತ್ರ ಪಡೆದಿರುವುದು ನನಗೆ ಮೇಲನೋಟಕ್ಕೆ ಕಂಡು ಬಂದಿರುತ್ತದೆಂದು ದೂರಿನಲ್ಲಿ ತಿಳಿಸಿರುತ್ತಾರೆ. | ದೂರು ಅರ್ಜಿಯನ್ನು ಪರಿಶೀಲಿಸಲಾಗಿ, ದೂರುದಾರರು ತಮ್ಮ ಹೆಸರು ಅರ್ಜಿಯ ಸಂಖ್ಯೆ ವಿಳಾಸ ಯಾವುದು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ. ನೇಮಕಾತಿ ಪ್ರಕ್ರಿಯೇಯು ಮೇರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ಆಯ್ಕೆ ಮಾಡುವುದರಿಂದ ಯಾವುದೇ ಲೋಪ ದೋಷಗಳು ಇರುವುದಿಲ್ಲ. ನೇಮಕಾತಿ ನಿಯಮಗಳ ಅನ್ವಯ ಅಂಗವಿಕಲ ಅಭ್ಯರ್ಥಿಗಳನ್ನು ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ದೈಹಿಕ ಪರೀಕ್ಷೆಗೆ ಒಳಪಡಿಸಿ ಪರಿಶೀಲಿಸಿದ ನಂತರ ನೇಮಕಾತಿ ಆದೇಶವನ್ನು ನೀಡುವುದರಿಂದ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿದೆ. |

**ಸಹಾಯಕ ಆಯುಕ್ತರು,**
**ಸದಸ್ಯರು, ಗ್ರಾಮಲೆಕ್ಕಿಗರ ನೇಮಕಾತಿ ಆಯ್ಕೆ ಪ್ರಾಧಿಕಾರ,**
**ಬಳ್ಳಾರಿ.**

**ಜಿಲ್ಲಾಧಿಕಾರಿಗಳು**
**ಹಾಗೂ ಗ್ರಾಮಲೆಕ್ಕಿಗರ ನೇಮಕಾತಿ ಆಯ್ಕೆ ಪ್ರಾಧಿಕಾರ**
**ಬಳ್ಳಾರಿ ಜಿಲ್ಲೆ, ಬಳ್ಳಾರಿ.**

ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣಾ ಇಲಾಖೆ ಮತ್ತು ಸದಸ್ಯರು, ಗ್ರಾಮಲೆಕ್ಕಿಗರ ನೇಮಕಾತಿ ಆಯ್ಕೆ ಪ್ರಾಧಿಕಾರ, ಬಳ್ಳಾರಿ.

ಜಿಲ್ಲಾ ಶಸ್ತ್ರ ಚಿಕಿತ್ಸಕರು ಮತ್ತು ಸದಸ್ಯರು, ಗ್ರಾಮಲೆಕ್ಕಿಗರ ನೇಮಕಾತಿ ಆಯ್ಕೆ ಪ್ರಾಧಿಕಾರ, ಬಳ್ಳಾರಿ.

ಉಪ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಮತ್ತು ಸದಸ್ಯರು, ಗ್ರಾಮಲೆಕ್ಕಿಗರ ನೇಮಕಾತಿ ಆಯ್ಕೆ ಪ್ರಾಧಿಕಾರ, ಬಳ್ಳಾರಿ.